ಪಾಠಶಾಲೆಗಳಿಗೆ ಶಿಕ್ಷಕರನ್ನು ನೇಮಿಸುವ ಬಗ್ಗೆ

೫೨೩. (ಎ) ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ? ಎಲ್ಲಾ ಶಾಲೆಗಳಿಗೆ ಶಿಕ್ಷಕರು ಇದ್ದಾರೆಯೇ ? ಅಥವಾ ಎಷ್ಟು ಶಿಕ್ಷಕರ ಹುದ್ದೆಗಳು ಖಾಲಿ ಇದೆ ?

ಬಿ) ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಕೂಡಲೇ ತುಂಬಲು ಕ್ರಮ ಕೈಗೊಳ್ಳಲಾಗುವುದೇ ? ಹಾಗೆ ತುಂಬಲು ಎಷ್ಟು ಕಾಲಾವಕಾಶಬೇಕು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—

ಎ) ರಾಜ್ಯದಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ ೩೨.೮೫೫

ಶಿಕ್ಷಕರಿಲ್ಲದೆ ಇರುವ ಶಾಲೆಗಳು ಯಾವುವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳ ಸಂಖ್ಯೆ. ೫೧೬೩

ಬಿ) ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಜಿಲ್ಲಾ ಆಯ್ಕೆ ಸಮಿತಿಗಳ ಮೂಲಕ ತುಂಬುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಯೋಜನೇತರ ಖಾಲಿ ಹುದ್ದೆಗಳನ್ನು ಶೀಘ್ರದಲ್ಲಿಯೇ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಪ್ರವಾಸಿ ಮಂದಿರಗಳಲ್ಲಿ ಶಾಸಕರಿಗೆ ಕೊಠಡಿಗಳನ್ನು ಮೀಸಲಿರಿಸುವ ಬಗ್ಗೆ

೫೨೪. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ) ತಾಲ್ಲೂಕು ಕೇಂದ್ರಗಳಲ್ಲಿರುವ ಪ್ರವಾಸಿ ಮಂದಿರಗಳಲ್ಲಿ ಶಾಸಕರಿಗೆ ಕೊಠಡಿಗಳನ್ನು ಮೀಸಲಿರಿಸಲು ಸರಕಾರದವರ ಸೂಚನೆ ಇದೆಯೆ, ಹಾಗಿದ್ದಲ್ಲಿ ಹೆಚ್. ಡಿ. ಕೋಟೆಯ ಪ್ರವಾಸಿ ಮಂದಿರದಲ್ಲಿ (ಪಿ. ಡಬ್ಲ್ಯೂ. ಡಿ) ಶಾಸಕರಿಗೆ ಕೊಠಡಿ ದೊರೆಯದಂತೆ ಮಾಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ, ಇದರ ಬಗ್ಗೆ ಕ್ರಮ ಕೈಕೊಳ್ಳಲಾಗುವುದೇ ?

ಬಿ) ಹೆಗ್ಗಡ ದೇವನಕೋಟೆ ತಾಲ್ಲೂಕಿನಲ್ಲಿ '' ಸೇತುಬಂಧನ '' ಯೋಜನೆಯನ್ವಯ ಕಟ್ಟಲಾಗಿರುವ ಸೇತುವೆಗಳ ಸಂಖ್ಯೆ ಎಷ್ಟು, ಹಾಗಿಲ್ಲದಿದ್ದಲ್ಲಿ ಕಟ್ಟಲಾಗುವುದೇ, ಕಟ್ಟಿದ್ದರೆ ಎಲ್ಲೆಲ್ಲಿ ಕಟ್ಟಲಾಗಿದೆ ?

ಸಿ) ಹೆಗ್ಗಡ ದೇವನಕೋಟೆ ತಾಲ್ಲೂಕಿನ ಹಂಪಾಪುರ, ಹೊಮ್ಮರಗಳ್ಳಿ, ಹೈರಿಗೆ, ಹ್ಯಾಂಡ್ ಪೋಸ್ಟ್‌ಗಳಲ್ಲಿ ರಸ್ತೆ ಪಕ್ಕದಲ್ಲಿ ಚರಂಡಿ ಕಟ್ಟಲು ಮಂಜೂರು ಮಾಡಿರುವ ಹಣವೆಷ್ಟು, ಎಲ್ಲೆಲ್ಲಿ ಎಷ್ಟು ಕೆಲಸ ಪೂರೈಸಲಾಗಿದೆ, ಈಗ ಕೆಲಸ ಕಾರ್ಯಗಳು ಸ್ಥಗಿತಗೊಂಡಿರಲು ಕಾರಣವೇನು ?

ಡಿ) ಹೆಗ್ಗಡ ದೇವನಕೋಟೆ ತಾಲ್ಲೂಕಿಗೆ ಮೇಲಿನ ಕಾಮಗಾರಿಗಳಿಗಾಗಿ ೧೯೬೬–೬೭ನೇ ಸಾಲಿಗೆ ಸರಕಾರ ಮಂಜೂರು ಮಾಡಿರುವ ಹಣವೆಷ್ಟು, ಖರ್ಚು ಮಾಡಿರುವ ಹಣವನ್ನು ವಿವರವಾಗಿ ಕೊಡುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಅಚ್ಚುಕಟ್ಟು ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು).—

ಎ) ಪ್ರವಾಸಿ ಮಂದಿರದಲ್ಲಿ ಶಾಸಕರಿಗೆ ಕೊಠಡಿಗಳನ್ನು ಮೀಸಲಿರಿಸುವುದಕ್ಕೆ ಸಂಬಂಧಿಸಿ ಸರ್ಕಾರದವರಿಂದ ಯಾವುದೇ ಸೂಚನೆ ಕೊಟ್ಟಿರುವುದಿಲ್ಲ. ಲೋಕೋಪಯೋಗಿ ಇಲಾಖೆಯ ಪ್ರವಾಸಿ ಮಂದಿರದಲ್ಲಿ ಶಾಸಕರಿಗೆ ಕೊಠಡಿ ದೊರೆಯದೆ ತೊಂದರೆಯಾಗಿರುವ ನಿರ್ದಿಷ್ಟ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದು.

ಆ) ಸೇತು ಬಂಧನ ಯೋಜನೆಯನ್ವಯ ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಮೂರು ಸೇತುವೆಗಳನ್ನು ಕಟ್ಟಲಾಗಿದೆ. ವಿವರ ಈ ರೀತಿ ಇದೆ.

ಕ್ರಮಾಂಕ	ಸೇತುವೆ ಕಟ್ಟಲಾದ ಸ್ಥಳ	ಅಂದಾಜು (ರೂಪಾಯಿಗಳಲ್ಲಿ)	ಯಾವಾಗ ಕಟ್ಟಿದ್ದು.
೧	೨	೩	೪
೧	ಬಿ ಎಂ. ರಸ್ತೆಯಿಂದ ಗೆಜ್ಜಪ್ಪನಹುಂಡಿ ಮೂಲಕ ಸಿದ್ಧರಾಮನಹುಂಡಿ ರಸ್ತೆಯಲ್ಲಿ.	೨೫,೦೦೦	೧೯೮೪-೮೫.
೨	ಹೆಚ್. ಬಿ. ರಸ್ತೆಯಿಂದ ಗಣೇಶಪುರ ಮೂಲಕ ಉದಯನಗರಕ್ಕೆ ಹೋಗುವ ರಸ್ತೆಯಲ್ಲಿ.	೨೫,೦೦೦	೧೯೮೫-೮೬.
೩	ಕಬಿನಿ ಬಲದಂಡೆ ನಾಲೆಯಿಂದ ಮುನಗನಹಳ್ಳಿ ಸೇರುವ ರಸ್ತೆಯಲ್ಲಿ.	೨೫,೦೦೦	೧೯೮೫-೮೬.

ಇ) ವಿವರಗಳು ಈ ರೀತಿ ಇದೆ.—

ಕ್ರಮ ಸಂಖ್ಯೆ	ಸ್ಥಳ	ಮಂಜೂರಾಗಿರುವ ಕಾಮಗಾರಿಗಳ ಸಂಖ್ಯೆ	ಮಂಜೂರಾದ ಹಣ (ರೂ.ಗಳಲ್ಲಿ)	ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ.
೧	೨	೩	೪	೫
೧	ಹಂಪಾಪುರ ರಸ್ತೆ	ಮಂಜೂರಾಗಿಲ್ಲ.	ಇಲ್ಲ.	ಇಲ್ಲ.
೨	ಹೊಮ್ಮರಗಳ್ಳಿ	೩	೭೦,೦೦೦	೩.
೩	ಹೈರಿಗೆ	೪	೧,೦೦,೦೦೦	೨.
೪	ಹ್ಯಾಂಡ್ ಪೋಸ್ಟ್	೧೦	೨,೨೬,೦೦೦	೩.
	ಒಟ್ಟು	೧೭	೩,೯೬,೦೦೦	೮.

ಹಣದ ಲಭ್ಯತೆಯನ್ವಾಧರಿಸಿ, ಉಳಿದ ಕೆಲಸವನ್ನು ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು.

ಈ) ವಿವರಗಳು ಈ ರೀತಿ ಇದೆ.—

ಕ್ರಮಾಂಕ.	ಯೋಜನೆ ವಿವರ.	೧೯೮೬-೮೭ ರಲ್ಲಿ ಮಂಜೂರಾದ ಹಣ. (ರೂಪಾಯಿಗಳಲ್ಲಿ)	೧೯೮೬-೮೭ ರಲ್ಲಿ ಇದು ವರೆವಿಗೆ ಖರ್ಚು.
೧	೨	೩	೪
೧	ಸೇತುಬಂಧನ ಯೋಜನೆ (ಒಂದು ಕಾಮಗಾರಿ).	೨೫,೦೦೦	ಏನೂ ಇಲ್ಲ.
೨	ಚರಂಡಿಗಳ ನಿರ್ಮಾಣ.	೩,೯೬,೦೦೦	ಇಲ್ಲ.